# ದಿನಾಂಕ : 28-05-2010 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ಮಂಡಿಸಲಾದ ನಿರ್ಣಯ.

## ವಿಷಯದ ಸಂಖ್ಯೆ: 34/2010-11

ಶ್ರೀ. ಬಿ.ಎಸ್. ಸತ್ಯನಾರಾಯಣ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

ದಿನಾಂಕ:12-03-2010 ರಂದು ವಿಷಯದ ಸಂಖ್ಯೆ:843/2009-10 ರಲ್ಲಿ 2010-11 ನೇ ಸಾಲಿನ ಆಯವ್ಯಯಕ್ಕೆ ಮಹಾನಗರ ಪಾಲಿಕೆಯ ಕೌನ್ಸಿಲ್ ಅನುಮೋದನೆಯನ್ನು ಕಾಯ್ದಿರಿಸಿ, ಶೇಕಡ 30% ರಷ್ಟು ಲೇಖಾನುದಾನವನ್ನು ಖರ್ಚು ಮಾಡಲು ಮಾನ್ಯ ಆಡಳಿತಗಾರರು ತೀರ್ಮಾನಿಸಿರುತ್ತಾರೆ.

ಈಗ ಪಾಲಿಕೆಯಲ್ಲಿ ಸ್ಥಾಯಿ ಸಮಿತಿಗಳು ಇನ್ನೂ ಅಸ್ತಿತ್ವಕ್ಕೆ ಬಂದಿಲ್ಲದೇ ಇರುವುದರಿಂದ ಹಾಗೂ 2010-11 ನೇ ಸಾಲಿನ ಆಯವ್ಯಯವನ್ನು ಸ್ಥಾಯಿ ಸಮಿತಿ ಮತ್ತು ಕೌನ್ಸಿಲ್ ಸಭೆಯ ಅನುಮೋದನೆಯೊಂದಿಗೆ ಸರ್ಕಾರಕ್ಕೆ ಕಳುಹಿಸಬೇಕಾಗಿರುತ್ತದೆ.

ಈ ಹಿನ್ನೆಲೆಯಲ್ಲಿ, ಸಾರ್ವಜನಿಕರ ಕೆಲಸಕಾರ್ಯಗಳ ಹಿತದೃಷ್ಟಿಯಿಂದ ಈಗಾಗಲೇ ಶೇಕಡ 30% ರಷ್ಟು ಖರ್ಚು ಮಾಡಲು ಅನುಮೋದನೆಯಾಗಿರುವುದರ ಜೊತೆಗೆ ಹೆಚ್ಚುವರಿಯಾಗಿ ಶೇಕಡ 30% ರಷ್ಟು ಅಂದರೆ ಒಟ್ಟಾರೆಯಾಗಿ ಶೇಕಡ 60% ರಷ್ಟು ಲೇಖಾನುದಾನವನ್ನು ಪಾಲಿಕೆಯು ಖರ್ಚುಮಾಡಲು ಅನುಮೋದಿಸುವುದು.

ಶ್ರೀ.ಪಿ.ಎನ್. ಸದಾಶಿವ ರವರು ಶ್ರೀ.ಬಿ.ಎಸ್. ಸತ್ಯನಾರಾಯಣ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

**ನಿರ್ಣಯ:** ದಿನಾಂಕ:12-03-2010 ರಂದು ವಿಷಯದ ಸಂಖ್ಯೆ:843/2009-10 ರಲ್ಲಿ 2010-11 ನೇ ಸಾಲಿನ ಆಯವ್ಯಯಕ್ಕೆ ಮಹಾನಗರ ಪಾಲಿಕೆಯ ಕೌನ್ಸಿಲ್ ಅನುಮೋದನೆಯನ್ನು ಕಾಯ್ದಿರಿಸಿ, ಶೇಕಡ 30% ರಷ್ಟು ಲೇಖಾನುದಾನವನ್ನು ಖರ್ಚು ಮಾಡಲು ಮಾನ್ಯ ಆಡಳಿತಗಾರರು ತೀರ್ಮಾನಿಸಿರುತ್ತಾರೆ.

ಈಗ ಪಾಲಿಕೆಯಲ್ಲಿ ಸ್ಥಾಯಿ ಸಮಿತಿಗಳು ಇನ್ನೂ ಅಸ್ತಿತ್ವಕ್ಕೆ ಬಂದಿಲ್ಲದೇ ಇರುವುದರಿಂದ ಹಾಗೂ 2010-11 ನೇ ಸಾಲಿನ ಆಯವ್ಯಯವನ್ನು ಸ್ಥಾಯಿ ಸಮಿತಿ ಮತ್ತು ಕೌನ್ಸಿಲ್ ಸಭೆಯ ಅನುಮೋದನೆಯೊಂದಿಗೆ ಸರ್ಕಾರಕ್ಕೆ ಕಳುಹಿಸಬೇಕಾಗಿರುತ್ತದೆ.

..................2

ಈ ಹಿನ್ನೆಲೆಯಲ್ಲಿ, ಚರ್ಚೆಯ ನಂತರ ಸಾರ್ವಜನಿಕರ ಕೆಲಸಕಾರ್ಯಗಳ ಹಿತದೃಷ್ಟಿಯಿಂದ ಈಗಾಗಲೇ ಶೇಕಡ 30% ರಷ್ಟು ಖರ್ಚು ಮಾಡಲು ಅನುಮೋದನೆಯಾಗಿರುವುದರ ಜೊತೆಗೆ ಹೆಚ್ಚುವರಿಯಾಗಿ ಶೇಕಡ 30% ರಷ್ಟು ಅಂದರೆ ಒಟ್ಟಾರೆಯಾಗಿ ಶೇಕಡ 60% ರಷ್ಟು ಲೇಖಾನುದಾನವನ್ನು ವೇತನಕ್ಕಾಗಿ ಪಾಲಿಕೆಯು ಖರ್ಚು ಮಾಡಲು ಈ ಸಭೆಯು ಸರ್ವಾನುಮತದಿಂದ ಸರ್ಕಾರವನ್ನು ಕೋರಲು ತೀರ್ಮಾನಿಸಲಾಯಿತು.

ಎಸ್.ಕೆ. ನಟರಾಜ

(ಎಸ್.ಕೆ. ನಟರಾಜ)
ಮಹಾಪೌರರು.